

**ರೂಪಿಸಿಕೊಳ್ಳಬೇಕು ಅಂತ. ಇದನ್ನ ಯಾವ ನೆಲೆಯೊಳಗೆ ಹೇಳಿದ್ರಿ?**

ಹಾಗಲ್ಲ, ವೆಸ್ಟರ್ನ್ ಕ್ರಿಟಿಸಿಸಂ ಓದ್ತಿರುವಾಗ್ಲೂ ಕೂಡ ನಾನು ಕೇವಲ ಟೂಲ್ಸ್‌ಗಳನ್ನು ಮಾತ್ರ ತೆಗೆದುಕೊಳ್ತಿದ್ದೆ. ಅಂದ್ರೆ ತಾತ್ವಿಕತೆ ಬೇರೆ. ಲಯೊನೆಲ್ ಟ್ರಿಲ್ಲಿಂಗ್ ನಾನು ಮತ್ತೆ ಮತ್ತೆ ಓದುವ ಒಬ್ಬ ವಿಮರ್ಶಕ. ಅವನದೊಂದು ಲೇಖನವಿದೆ. 'ಅಥೆಂಟಿಸಿಟಿ ಆಂಡ್ ಸಿನ್ಸಿಯಾರಿಟಿ' ಅಂತ. ಅಂದ್ರೆ, ಲಿಟರರಿ ಥಿಯೆರಿ ಒಂದು ಕಡೆ ಇರ್ತದೆ, ಅದನ್ನ ರೂಪಿಸುವ ಪರಿಕರಗಳು ಕೆಲವಿರ್ತವೆ, ಆ ಪರಿಕರಗಳು ಯಾವುವು ಅನ್ನೋದು ನನ್ನ ಶೋಧ. ಆ ಪರಿಕರಗಳು ಟೆಕ್ಸ್ಟ್‌ಗೆ ಅಂಟಿಕೊಂಡಿರಬೇಕು. ಅಂದ್ರೆ ಸಾಹಿತ್ಯದ ಚರಿತ್ರೆಯೊ, ಸಾಹಿತ್ಯದಲ್ಲಿ ಚರಿತ್ರೆಯೊ? ನನಗೂ ಒಂದು ಚರಿತ್ರೆ ಗೊತ್ತಿದೆ. ಆ ಚರಿತ್ರೆ ಸರಿಯೊ ತಪ್ಪೊ ಅಂತ ನೋಡೊದಿಕ್ಕೆ ನಾವು ಸಾಹಿತ್ಯವನ್ನ ಓದಬೇಕಾಗಿಲ್ಲ. ಆ ಕೃತಿಯೊಳಗೆ ಯಾವ ಬಗೆಯ ಚರಿತ್ರೆಯನ್ನ ರೂಪಿಸಲಾಗ್ತಿದೆ ಅನ್ನೋದು ಮುಖ್ಯ. ಈ ಪ್ರಶ್ನೆ ನನಗೆ ಬಂದದ್ದು, ಚಿದಾನಂದಮೂರ್ತಿ ಅವರ 'ಪಂಪಕವಿಯ ಯುಗಧರ್ಮ ಮತ್ತು ಮೌಲ್ಯಪ್ರಸಾರ' ಲೇಖನವನ್ನು ಓದಿದಾಗ. ಇದರಲ್ಲಿ ಮಾಹಿತಿ ಬಹಳ ಅದ್ಭುತವಾಗಿದೆ. ನನ್ನ ಪ್ರಶ್ನೆ ಇದ್ದದ್ದು ಹತ್ತನೇ ಶತಮಾನದ ಬಗ್ಗೆ ನಿಮಗೆ ಏನಾದರೂ ತಿಳಿವಳಿಕೆ ಇದ್ರೆ ಅದು ಎಲ್ಲಿಂದ ಬಂತು? ಹತ್ತನೇ ಶತಮಾನದ ಶಾಸನಗಳಿಂದ ಅಥವಾ ಕಾವ್ಯಗಳಿಂದ. ಇದು ಬಿಟ್ರೆ ಬೇರೆ ಚರಿತ್ರೆಗಳು ಗೊತ್ತಿಲ್ಲ ನಿಮಗೆ. ಇದನ್ನ ಅರ್ಥ ಮಾಡಿಕೊಳ್ಳಲಿಕ್ಕೆ ಬೇರೆ ಆಕರ ಏನಿದೆ? ಹತ್ತನೇ ಶತಮಾನದ ಕರ್ನಾಟಕ ಏನಿತ್ತು? ಬದುಕು ಏನಿತ್ತು? ಇದಕ್ಕೆಲ್ಲ ಇನ್ನುಳಿದ ಖಚಿತ ಆಕರಗಳೇನಿವೆ? ಶಾಸನಗಳನ್ನು ಸಂಪೂರ್ಣವಾಗಿ ನಂಬಬೇಕಾ? ಯಾಕೆಂದರೆ ಅವು ಸೀಮಿತ ರಾಜರ ಬಗ್ಗೆ ಮಾತ್ರ ಇವೆ. ಈಗ ಪಂಪನಲ್ಲಿ ಕ್ಷಾತ್ರ ಇದೆ, ತ್ಯಾಗ ಇದೆ, ಇದೆಲ್ಲ ಹತ್ತನೇ ಶತಮಾನದ ಮೌಲ್ಯ. ಅಂದ್ರೆ, ಪಂಪನ ಮುಖಾಂತರ ಹತ್ತನೇ ಶತಮಾನವನ್ನ ಕನ್‌ಸ್ಟ್ರಕ್ಟ್ ಮಾಡ್ತಾ ಇದ್ದೀವಿ.